ನಿಜ ಹೇಳಿ ಅವನ ಕಾಲು ಹಿಡಿದು ಅಳಬೇಕೆನಿಸಿತು. ಆದರೆ ಉಮ್ಮನ ಎದುರಿಗೆ ಈ ಮಾತು ಅಂದರೆ ಅವಳು ನನ್ನನ್ನು ಕೊಂದರೂ ಕೊಂದಾಳೆಂಬ ಭಯದಲ್ಲಿ ನಾನು ಮಾತಾಡದೆ ಉಳಿದೆ. ಬಾಪುಟ್ಟಿ ಏನೂ ಮಾತಾಡದೆ, ಅಳುತ್ತಿದ್ದ ನನ್ನ ತಲೆಯನ್ನು ನೇವರಿಸಿದ. ಉಮ್ಮ ಅವನಿಗೊಂದು ಚಾ ಮಾಡಬಾರದಾ? ಸುಮ್ಮನೆ, ಆಗಿದ್ದು ಆಯ್ತು ಬಿಡು, ಎಲ್ಲ ಮುಗಿಯಿತಲ್ಲ? ಬಾಪುಟ್ಟಿ ಉಮ್ಮನನ್ನು ಅಲ್ಲಿಂದ ಎಬ್ಬಿಸಿದ. ಉಮ್ಮ ಹೋದಮೇಲೆ ಹೇಳಿಬಿಡಲೇ? ಎಂದು ಬಾಯ್ತನಕ ಬಂದ ಮಾತನ್ನು ನುಂಗಿದೆ. ಹೇಳಿದ್ದರೆ ಬಹುಶಃ ಬಾಪುಟ್ಟಿಗೆ ಸಂತೋಷವಾಗುತ್ತಿತ್ತು. ಹಾಗಂತ ಈಗ ಒಮ್ಮೊಮ್ಮೆ ಅನಿಸುತ್ತದೆ. ಹೇಳಿದ್ದರೆ ಉಣ್ಣಿಗಾಗಿಯೇ ಹೋದೆನಂತೆ, ನಿನಗಾಗಿದ್ದರೆ ಜೀವವನ್ನೇ ಕೊಡುತ್ತಿದ್ದೆ ಅನ್ನುತ್ತ ನನ್ನನ್ನು ಮೋಟು ಕೈಗಳಿಂದ ಸೆಳೆದುಕೊಳ್ಳುತ್ತಿದ್ದನೇನೋ ನನ್ನ ಬಾಪುಟ್ಟಿ ಅನಿಸುತ್ತದೆ. ಆದರೆ ಈಗ ಹೇಳಲಾರೆ. ಯಾಕೆಂದರೆ ಈಗ ಹೇಳಿದರೆ ಬಾಪುಟ್ಟಿಗೆ ಬೇಸರಾಗಬಹುದು. ಅವನೀಗ ನನ್ನ ಜೊತೆ ಇದ್ದಾನೆ. ಬಾಪುಟ್ಟಿ ಉಮ್ಮ, ಅಮ್ಮ ಅಪ್ಪ–ನಾವೆಲ್ಲ ಒಂದೇ ಕಡೆ. ಒಂದೇ ಮನೆ.

ಅಷ್ಟೆಲ್ಲ ರಗಳೆ ಊರಿನಲ್ಲಿ ಆದಮೇಲೆ ನಾನು ಓದು ಮುಗಿಸಿ ಒಳ್ಳೆಯ ಕೆಲಸ ಹಿಡಿದು ಬಾಪುಟ್ಟಿಗೆ ಒಂದು ಒಳ್ಳೆ ಮಳಿಗೆ ಅಂಗಡಿ ಹಾಕಿಕೊಟ್ಟು, ನಾವೆಲ್ಲ ಒಂದೇ ಮನೆಗೆ ಶಿಫ್ಟ್ ಆಗಿದ್ದೇವೆ. ಇವತ್ತು ಅಪ್ಪ ಅಮ್ಮ ಉಮ್ಮ ಎಲ್ಲರಿಗೂ ವಯಸ್ಸಾಗಿದೆ. ನನ್ನ ತಂಗಿಗೆ ಮದುವೆಯಾಗಿದೆ. ಬಾಪುಟ್ಟಿಗೆ ಮದುವೆ ಬೇಡವಂತೆ; ಅದು ಆಮೇಲೆ ನೋಡುವ. ಸದ್ಯಕೆ ನನಗೆ ಹೆಣ್ಣು ಹುಡುಕುತ್ತಿದ್ದಾರೆ. ಇಲ್ಲಿಯ ತನಕ ಆ ಲೇಖ ಬರೆದವನು ನಾನೆಂದು ನಾನು ಬಾಪುಟ್ಟಿಗೆ ಹೇಳಿಲ್ಲ. ಈಗ ಹೇಳಿದರೆ ಬಹುಶಃ ನಾನು ಪ್ರಾಯಶ್ಚಿತ ಮಾಡಿಕೊಳ್ಳುತ್ತಿದ್ದೇನೆಂದು ಅವನಿಗೆ ತೋಚಬಹುದು. ಇದು ಪ್ರಾಯಶ್ಚಿತವಲ್ಲ. ಯಾಕೆಂದರೆ ನನ್ನ ಬಾಪುಟ್ಟಿಗಾಗಿ ನಾನು ಏನನ್ನೂ ಮಾಡಬಲ್ಲೆ. ನಿಜ. ಅಂದಹಾಗೆ ಉಣ್ಣಿ, ನಾಯರ್ ಮತ್ತು ಪ್ರಭಾಳ ಬಗ್ಗೆ ಈ ತನಕ ಸುದ್ದಿಯಿಲ್ಲ. ಅವರು ಎಲ್ಲಾದರೂ ಚೆನ್ನಾಗಿರಬಹುದೆಂದು ನಾನು ಬಾಪುಟ್ಟಿ ಆಗಾಗ ಮಾತಾಡುತ್ತೇವೆ. ಪ್ರಭಾಳ ಮಗಳಿಗೆ ಅವಳಂತೇ ಉದ್ದ ಕೂದಲೂ, ಉಣ್ಣಿಯ ಜೇನು ಕಂಗಳೂ ಇರಬಹುದೆಂದು ಕಲ್ಪಿಸುತ್ತೇವೆ. ಇಷ್ಟೆಲ್ಲ ಆದರೂ ಮನಸಿನಲ್ಲಿ ಕಹಿಯಿಟ್ಟುಕೊಳ್ಳದ ಬಾಪುಟ್ಟಿಯ ಬಗ್ಗೆ ನನಗೆ ಹೆಮ್ಮೆಯೆನ್ನಿಸುತ್ತದೆ. ನಾನು ಅದನ್ನು ಮಾತಿನಲ್ಲಿ ಹೇಳುವುದಿಲ್ಲ. ಎಲ್ಲ ಭಾವಗಳನ್ನೂ ಸಮರ್ಥವಾಗಿ ಮಾತಾಗಿಸಲಾರದೇ ಹೋದಾಗ ಮಾತು ಅರ್ಥಹೀನವಾಗುತ್ತದೆ.

ಈಗ ಹೇಳಿ ಇದು ಯಾರ ಕತೆ?

**ಶಾಂತಿ ಕೆ. ಅಪ್ಪಣ್ಣ**

ಕೊಡಗಿನವರಾದ ಶಾಂತಿ ರೈಲ್ವೆ ಇಲಾಖೆಯ ಉದ್ಯೋಗಿ. ನರ್ಸಿಂಗ್‌ನಲ್ಲಿ ಡಿಪ್ಲೋಮಾ ಮಾಡಿರುವ ಅವರ ಅನೇಕ ಕತೆ, ಕವಿತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಮನಸು ಅಭಿಸಾರಿಕೆ' ಅವರ ಕಥಾಸಂಗ್ರಹ.